ಶ್ರೀ ದೇವೇಂದ್ರಪ್ಪ ಘಾಳಪ್ಪ.—ಹಿಂದೆ ಇದ್ದ ಪ್ರಕಾರ ಆ ರೀತಿ ಇತ್ತು? ಈಗ ಮತ್ತೊಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಆದಷ್ಟು ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಸುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—೧೯೭೪ನೇ ಇಸವಿಯಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೆ ಕೊಟ್ಟಂಥ ಕಾಲದಲ್ಲಿ ಶೇ ೪ ರೂಪಾಯಿ ಬಡ್ಡಿ ಕೊಡುವ ಅವಕಾಶ ಇತ್ತು. ಆದನ್ನು ತೆಗೆದು ನೀವು ಈಗ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಡಿಸಿ ಅವರಿಗೆ ಶೇ. ೧೧ ರೂಪಾಯಿ ಬಡ್ಡಿ ಹಾಕಂಥಂತಹ ಉದ್ದೇಶವಾದರೂ ಏನು ಇತ್ತು ಸ್ವಾಮಿ?

SRI DEVENDRAPPA GHALAPPA.—In the original Karnataka **Land Reforms** Act which came into force with certain amendments on 1-3-1974, there was a provision for the tenants U/S. 53 to pay the amount of premium over a period not exceeding 20 years at 4½ per cent interest. However, subsequently, it was found by the Government that a large number of tenants were unable to pay the premium from their own resources even in instalments ever a period of 20 years,

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಶೇ. ೪ ರೂಪಾಯಿ ಬಡ್ಡಿ ಹಾಕಿ ೨೦ ಕಂತುಗಳಲ್ಲಿ ವಸೂಲಿ ಮಾಡುತ್ತಿದ್ದಂದು ಸುಲಭವೇ? ಶೇ. ೧೧ ರೂಪಾಯಿ ಬಡ್ಡಿ ಹಾಕಿ ೧೫ ಕಂತುಗಳಲ್ಲಿ ವಸೂಲಿ ಮಾಡುವುದು ಸುಲಭವೆ ಸ್ವಾಮಿ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಅಧ್ಯಕ್ಷರೇ ರಿಸರ್ವ್ ಬ್ಯಾಂಕಿನಿಂದ ಕೆಲವು ಅಡೆತಡೆಗಳು ಆದುದರಿಂದ ಅದನ್ನು ಮಾಡಲಿಕ್ಕೆ ಆಗಲಿಲ್ಲ. Subsequently it was also found by the Government that under the Karnataka Land Reforms Act, the liability of the Government to disburse the entire amount payable to certain categories of land lords like widows minors, etc. could not be discharged.

ಶ್ರೀ ಕಾಗೋಡು ತಿಮ್ಮಪ್ಪ.—ಇದ್ದಂತ ಅನುಕೂಲವನ್ನು ಕಿತ್ತುಹಾಕಿ ಇನ್ನಷ್ಟು ಹೊರೆಯನ್ನು ಗೇಣಿದಾರರ ಮೇಲೆ ಹಾಕುವುದು ಏಕೆ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಅಧ್ಯಕ್ಷರೇ, ಸರಿಯಾದ ಮಾಹಿತಿ ಇಲ್ಲದೇ ಇರುವುದರಿಂದ ನಾಳೆ ಹೇಳುತ್ತೇನೆ.

ಅಧ್ಯಕ್ಷರು.— ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

1-30 P.M.

Minor Irrigation Works in Gubbi and Sira taluks

118 SRI T. TAREGOWDA (Kallambella).—Will the Minister of State for Minor Irrigation and Protocol be pleased to state :—

whether the estimates for the following Minor Irrigation Works in Gubbi and Sira taluks has been sanctioned and orders issued for their urgent execution ;

(1) "Kambada Rangegowdanakatte Kere" near Ankasandra, Chelur hobli, Gubbi taluk ;

(2) "Chennalli Katte tank", near Tavarekere, Gollarahalli, Sira taluk ;

(3) "Ranganahalli Minor Tank", Sira taluk ;

(4) Jarekal bande halla Tank, Bukkapatna hobli, Sira taluk ;

(5) Minor tank across "Chowlahalla" near Neralagudda, Bukkapatna hobli, Sira taluk ?

SRI H. C. SRIKANTAIAH (Minister of State for Minor Irrigation and Protocol).—

(1) No.

(2) No.

(3) Estimate has been administratively approved by the Chief Engineer, Minor Irrigation and Public Health Engineering, Bangalore.

(4) No.

(5) No.

ಶ್ರೀ ಟಿ. ತಾರೇಗೌಡ.—ಸ್ವಾಮಿ ಗುಬ್ಬಿ ತಾಲೂಕಿನ ಕಂಬದ ರಂಗೇಗೌಡನ ಕಟ್ಟೆಕೆರೆ ಮಾಡಿಸಬೇಕೂ ಎಂದೂ ಸುಮಾರು ೨ ವರ್ಷದಿಂದ ಪ್ರಯತ್ನಪಟ್ಟರು ಅದರ ಬಗ್ಗೆ ಅಂದಾಜು ಅಲ್ಲಿ ಇಲ್ಲಿ ಓಡಾಡುತ್ತಿದೆ ಎಂದು ತಿಳಿದು ಬಂದಿದೆ ಮೈನ್ಸ್ ಚೀಫ್ ಇಂಜಿನಿಯರ್‌ರವರನ್ನು ಕೇಳಿದ್ದಕ್ಕೆ ಅವರು ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ತಿಳಿಸಿದ್ದೇನೆ ಎಂದು ಹೇಳುತ್ತಾರೆ ಇದಂ ನಿಜ ಸ್ಥಿತಿ ಏನು ಎಂದು ತಿಳಿಸುತ್ತಿರಾ ? ಇನ್ನು ಶಿರಾ ತಾಲೂಕಿನ ಮೈನರ್ ವರ್ಕ್ಸ್ ಬಗ್ಗೆ ಅಂದಾಜು ಮಂಜೂರು ಮಾಡಿ ಅಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ?

† ಶ್ರೀ ಹೆಚ್ ಸಿ. ಶ್ರೀಕಂಠಯ್ಯ.—ಈಗ ಇಲ್ಲಿ ಕೊಟ್ಟಿರತಕ್ಕ ಐದು ಕೆಲಸಗಳಲ್ಲಿ ಸಿರಾ ತಾಲೂಕಿನಲ್ಲಿ ಇರತಕ್ಕ ರಂಗನಹಳ್ಳಿ ಕೆರೆಯ ಕೆಲಸದ ಬಗ್ಗೆ ಅನುಮತಿ ಆಗಿ ಮಂಜೂರು ಆಗಿದೆ. ಇನ್ನು ಬೌಳ ಹಳ್ಳದ ಬಗ್ಗೆ ೧೯೭೭-೭೮ರ ಸಾಲಿನ ಬಡ್ಜೆಟ್ಟಿನಲ್ಲಿ ಸೇರಿಸಿದೆ ಇನ್ನು ಉಳಿಕೆ ಕೆಲಸವನ್ನು ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಸೇರಿಸತಕ್ಕ ಏರ್ಪಾಡು ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಸ್ವಾಮಿ, ರಂಗನಗೌಡನ ಕೆರೆಯನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೂ ಎಂದೂ ನಮ್ಮ ಜಿಲ್ಲಾ ಮಂತ್ರಿಗಳು ಅವರ ಅಧ್ಯಕ್ಷತೆಯಲ್ಲಿ ಹೇಳಿದರು ಈಗ ವಿಚಾರಿಸಿದರೆ ಚೀಫ್ ಇಂಜಿನಿಯರ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ತೆಗೆದುಕೊಳ್ಳಲಿಕ್ಕೆ ಹೇಳಿದ್ದೇನೆ ಎಂದು ಹೇಳುತ್ತಾರೆ. ಈಗ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಅಥವಾ ಇಲ್ಲವೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದನ್ನು ಈಗಾಗಲೇ ಸೇರಿಸಲಿಕ್ಕೆ ಪ್ರಯತ್ನಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ವರ್ಕ್ ಬಗ್ಗೆ ಫೈನಲ್ ಮಾಡಿದ್ದೇವೆ ಎಂದು ಮೊನ್ನೆತಾನೆ ಫೈನಾನ್ಸ್ ಮಿನಿಸ್ಟರ್ ಹೇಳಿದ್ದಾರೆ.

ಶ್ರೀ ಹೆಚ್ ಸಿ. ಶ್ರೀಕಂಠಯ್ಯ.—ಈಗ ಅವರು ಕೇಳಿರತಕ್ಕ ಐದು ಕೆಲಸಗಳಲ್ಲಿ ಎರಡು ಕೆಲಸಗಳ ಬಗ್ಗೆ ಮಂಜೂರು ಆಗಿದೆ ಎಂದು ಹೇಳಿದ್ದೇನೆ. ಇನ್ನು ಮೂರು ಕೆಲಸಗಳ ಬಗ್ಗೆ ಆಗಬೇಕಾದ್ದು ಇದೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ ಫೈನಾನ್ಸ್ ಮಿನಿಸ್ಟರ್ ಅವರ ಭಾಷಣದಲ್ಲಿ ಎಲ್ಲಾ ವರ್ಕ್ಸ್ ಸೇರ್ಪಡೆ ಆಗಿದೆ ಎಂದು ಹೇಳಿದ್ದಾರೆ ಈಗ ಇವರು ಪ್ರಯತ್ನ ಪಡುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶೀಕಂಠಯ್ಯ.—ಅಧ್ಯಕ್ಷರೇ ಈಗ ೧೫ಕೋಟಿ ರೂಪಾಯಿಗೆ ಮೈನರ್‌ವರ್ಕ್ಸ್ ಇಷ್ಟು ಎಂದು ನಿಗದಿ ಮಾಡಿದ್ದೇವೆ. ಉಳಿದ ಕೆಲಸವನ್ನು ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಬಂದನಂತರ ಮಾಡಿಂಶ್ತೇವೆ.